ಕರ್ನಾಟಕ ವಿಧಾನ ಪರಿಷತ್

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1477
ಸದಸ್ಯರ ಹೆಸರು	:	ಶ್ರೀ ಪ್ರಕಾಶ್ ಕೆ.ರಾಥೋಡ್ (ನಾಮನಿರ್ದೇಶನ ಹೊಂದಿದವರು)
ಉತ್ತರಿಸುವ ದಿನಾಂಕ	:	19.03.2020
ಉತ್ತರಿಸುವ ಸಚಿವರು	:	ಜಲ ಸಂಪನ್ಮೂಲ ಸಚಿವರು

ಕ್ರ ಸಂ	ಪ್ರಶ್ನೆಗಳು	ಉತ್ತರಗಳು
ಅ)	ಬಾಗಲಕೋಟೆ ಜಿಲ್ಲೆ, ಹುನಗುಂದ ತಾಲ್ಲೂಕಿನ ನಾರಾಯಣಪುರ ಹಿನ್ನೀರಿನಿಂದ ಏತ ನೀರಾವರಿ ಯೋಜನೆಯ ಬದಲಾಗಿ ಹನಿ ನೀರಾವರಿ ಯೋಜನೆಯನ್ನು ಮಾಡಲಾಗಿದೆಯೇ;;	ಹೌದು ನಾರಾಯಣಪೂರ ಜಲಾಶಯದ ಹಿನ್ನೀರಿನಿಂದ ರಾಮಥಾಳ (ಮರೋಳ) ಏತ ನೀರಾವರಿ ಯೋಜನೆಯಡಿ ಹುನಗುಂದ ತಾಲ್ಲೂಕಿನ 26,200ಹೆ. ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು ಯೋಜಿಸಲಾಗಿತ್ತು. ಈ ಪೈಕಿ ಯೋಜನೆಯ ಹಂತ–1 ರಲ್ಲಿ 14,200 ಹೆ. ಪ್ರದೇಶಕ್ಕೆ ಹರಿ ನೀರಾವರಿ ಮೂಲಕವೇ ನೀರಾವರಿ ಕಲ್ಪಿಸಲಾಗಿದೆ. ಮುಂದುವರೆದು, ರೈತರ ಬೇಡಿಕೆಯನ್ವಯ ಯೋಜನೆಯ 2ನೇ ಹಂತದಡಿ ನಿಗದಿತ ನೀರಿನ ಬಳಕೆಯೊಂದಿಗೆ ಹೆಚ್ಚುವರಿ ಅಚ್ಚುಕಟ್ಟು ಕ್ಷೇತ್ರವನ್ನು ನೀರಾವರಿಗೆ ಒಳಪಡಿಸುವ ನಿಟ್ಟಿನಲ್ಲಿ ಬಾಕಿ 12,000ಹೆ. ಹರಿ ನೀರಾವರಿ ಯೋಜನೆಗೆ ಪರ್ಯಾಯವಾಗಿ ಹನಿ ನೀರಾವರಿ ಮೂಲಕ ಒಟ್ಟು 24,000 ಹೆಕ್ಟೇರ್ ಪ್ರದೇಶವನ್ನು ನೀರಾವರಿಗೆ ಒಳಪಡಿಸಲು ಯೋಜನೆಯನ್ನು ಕೈಗೆತ್ತಿಕೊಂಡು ಮಾರ್ಚ್–2017 ರಲ್ಲಿ ಪೂರ್ಣಗೊಳಿಸಲಾಗಿದೆ. ಇದಲ್ಲದೇ, ನಾರಾಯಣಪುರ ಜಲಾಶಯದ ಹಿನ್ನೀರಿನಲ್ಲಿ ಕೈಗೆತ್ತಿಕೊಂಡಿರುವ ಕೊಪ್ಪಳ ಏತ ನೀರಾವರಿ ಯೋಜನೆಯಡಿ (ಬಾಗಲಕೋಟೆ, ಕೊಪ್ಪಳ ಹಾಗೂ ಗದಗ ಜಿಲ್ಲೆಗಳಡಿ ನೀರಾವರಿ ಕಲ್ಪಿಸುವ ಯೋಜನೆ) ಹರಿ ನೀರಾವರಿ ಕಲ್ಪಿಸುವುದರ ಬದಲಾಗಿ ಹೆಚ್ಚುವರಿ ಅಚ್ಚುಕಟ್ಟು ಕ್ಷೇತ್ರಕ್ಕೆ ನೀರಾವರಿ ಕಲ್ಪಿಸುವ ಉದ್ದೇಶದಿಂದ ಪ್ರಸ್ತುತ ಹನಿ ನೀರಾವರಿ ಯೋಜನೆ ಅನುಷ್ಠಾನಕ್ಕೆ ಕ್ರಮ ವಹಿಸಲಾಗಿದೆ.
ಆ	ಹಾಗಿದ್ದಲ್ಲಿ, ಈ ಯೋಜನೆಯನ್ನು ಎಷ್ಟು ಎಕರೆ ಜಮೀನು ನೀರಾವರಿಗೆ ಒಳಪಟ್ಟಿರುತ್ತದೆ? (ವಿವರ ಒದಗಿಸುವುದು)	ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲ್ಲೂಕಿನಲ್ಲಿ ಅನುಷ್ಠಾನಗೊಳಿಸಲಾದ ರಾಮಥಾಳ (ಮರೋಳ) ಹನಿ ನೀರಾವರಿ ಯೋಜನೆಯ 2ನೇ ಹಂತದಲ್ಲಿ ಹನಿ ನೀರಾವರಿ ಮೂಲಕ ಒಟ್ಟು 59,280 ಎಕರೆ (24,000 ಹೆ) ಪ್ರದೇಶವು ಹನಿ ನೀರಾವರಿ ಸೌಲಭ್ಯಕ್ಕೆ ಒಳಪಟ್ಟಿರುತ್ತದೆ. ಕೊಪ್ಪಳ ಏತ ನೀರಾವರಿ ಯೋಜನೆಯಡಿ ಬಾಗಲಕೋಟೆ ಜಿಲ್ಲೆ ಹುನಗುಂದ ತಾಲ್ಲೂಕಿನ 21,736 ಎಕರೆ (8,800ಹೆ) ಕ್ಷೇತ್ರ ಹನಿ ನೀರಾವರಿಗೆ ಒಳಪಡಲಿದೆ.

ಸಂಖ್ಯೆ: ಜಸಂಇ 37 ಡಬ್ಲ್ಯೂಬಿಎಂ 2020

(ರಮೇಶ್ ಲ. ಜಾರಕಿಹೊಳಿ)
ಜಲ ಸಂಪನ್ಮೂಲ ಸಚಿವರು